International Journal of Kannada Research 2015; 1(1): 22-26

International Journal of Kannada Research
www.kannadajournal.com

ISSN: 2454–5813
IJSR 2015; 1(1): 22-26
© 2015 IJKS
www.kannadajournal.com
Received: 23-06-2015
Accepted: 25-07-2015

**Smt.Sridevi Harwal**
Associate Professor,
Godutai Doddappa Appa Degree College for Women,
S.B. Temple Road, Brahampur,
Kalaburagi, Karnataka-585103.

**Correspondence**
**Smt.Sridevi Harwal**
Associate Professor, Godutai Doddappa Appa Degree College for Women, S.B. Temple Road, Brahampur, Kalaburagi, Karnataka-585103.

# ವಚನಸಾಹಿತ್ಯದಲ್ಲಿ ಮತ್ತು ದಾಸೋಹ ಸೂತ್ರಗಳಲ್ಲಿ ಗುರುವಿನ ಮಹತ್ವ

**Smt.Sridevi Harwal.**

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಗುರುವಿನ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅಂತೆಯೇ ಅನಾದಿಕಾಲದಿಂದ ಗುರುವಿಗೆ ಮಹತ್ವದ ಸ್ಥಾನವಿದೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು ಪುರಂದರದಾಸರ ಒಂದು ಕಡೆ ನುಡಿದಿದ್ದಾರೆ. ಗುರುವಿನ ಗುಲಾಮನಾಗುವುದು ಎಂದರೆ ಸಂಪೂರ್ಣವಾಗಿ ಗುರುವಿಗೆ ನಮ್ಮನ್ನು ಅರ್ಪಿಸಿಕೊಳ್ಳುವುದು ಎಂದರ್ಥ. ಜ್ಞಾನವನ್ನು ನೀಡುವ ಗುರು ಬಾಹ್ಯ ಗುರುವಾದರೆ, ಆ ಜ್ಞಾನವನ್ನು ಆಚರಣೆಯಲ್ಲಿ ತುರುವಂತೆ ಮಾಡುವ ಅರಿವು ಆಂತರಿಕ ಗುರು. ಜ್ಞಾನಕ್ಕೆ ಮತ್ತು ಅರಿವಿಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವುದೆ ಗುರುವಿನ ಗುಲಾಮನಾಗುವುದು ಎಂದರ್ಥ. ಜ್ಞಾನವನ್ನು ನೀಡುವಲ್ಲಿ ಗುರುವಿನದು ದಾಸೋಹ ಭಾವವಾದರೆ ಗುರುವಿನ ಸೇವೆಯನ್ನು ಮಾಡುವಲ್ಲಿ ಶಿಷ್ಯನದು ದಾಸೋಹಂ ಭಾವವಾಗುತ್ರದೆ.

ಜನಪದ ಗೀತೆಯಲ್ಲಿ ಒಬ್ಬ ಸ್ತ್ರೀ ಹೇಳುವುದೇನೆಂದರೆ "ಮುಂದ ನೆನಿ ಗುರುವಿನ ಹಿಂದ ನೆನಿ ಸದಾಶಿವನ ಬಂದ ಕಂಟಕ ಬಯಲಾಗಿ" ಎಂದು ಹೇಳುತ್ತಾಳೆ. ನಮ್ಮ ಕಷ್ಟಗಳು ಬಯಲಾಗಬೇಕಾದರೆ ಮೊದಲು ಗುರುವನ್ನು ನಂತರ ದೇವರನ್ನು ನೆನೆಯಬೇಕು ಎಂದು ಹೇಳುತ್ತಾ ಗುರುವಿನ ಶ್ರೇಷ್ಟತೆಯನ್ನು ಮೆರೆದಿದ್ದಾಳೆ.

ಗ್ರಂತ್ವಶಾಸ್ತ್ರ ಹೇಳುವಂತೆ "ಹರಮುನಿದರೆ ಗುರು ಕಾಯ್ವ, ಗುರು ಮುನಿದರೆ ಹರ ಕಾಯ" ಎಂದರೆ, ದೇವರು ನಮ್ಮ ಮೇಲೆ ಮುನಿಸಿಕೊಂಡರೆ ಗುರು ನಮ್ಮನ್ನು ಕಾಯುತ್ತಾನೆ. ದುರದೃಷ್ಟವಶಾತ ಗುರು ಮುನಿದರೆ ಹರನಿಗೂ ಸಹಿತ ನಮ್ಮನ್ನು ಕಾಯಲು ಸಾಧ್ಯವಿಲ್ಲ ಎಂದು ಹೇಳುತ್ತಾ ಗುರುವಿನ ಸ್ಥಾನವನ್ನು ಅತೀ ಎತ್ತರಕೆ ಏರಿಸಲಾಗಿದೆ.

ಸರ್ವಜ್ಞ ಕವಿಯು ಗುರುವನ್ನು ಕುರಿತು ಈ ರೀತಿಯಾಗಿ ಉಲ್ಲೇಖಿಸುತ್ತಾನೆ.

**"ಗುರುವಿಂದ ಬಂಧುಗಳು, ಗುರುವಿಂದ ದೈವಗಳು**
**ಗುರುವಿಂದಲಿಹುದು ಪುಣ್ಯವು ಜಗಕೆಲ್ಲ ಗುರುವಿಂದ**
**ಮುಕ್ತಿ ಸರ್ವಜ್ಞ"**

ತ್ರಿಪದಿಯಲ್ಲಿ ಹೇಳುವಚಿತೆ

**ಮನೆಯು ಮೊದಲ ಪಾಠಶಾಲೆ**
**ಜನನಿ ತಾನೆ ಮೊದಲ ಗುರು**
**ಜನನಿಯಿಂದ ಪಾಠ ಕಲಿತ ಜನರು ಧನ್ಯರು**

ಮೇಲಿನ ತ್ರೀಪದಿಯಲ್ಲಿ ತಾಯಿಯೇ ಮಗುವಿಗೆ ಮೊದಲ ಗುರು ಎಂದು ಹೇಳಲಾಗಿದೆ. ಹುಟ್ಟಿದ ಮಗುವಿಗೆ ಹಸಿವಾದಾಗ ಹಾಲುಣಿಸಿ, ತೊದಲ್ನುಡಿಯಲ್ಲಿ ಮಾತನಾಡುವುದನ್ನು, ತಪ್ಪು ಹೆಜ್ಜೆಗಳನ್ನಿಡುವದನ್ನು ಕಲಿಸುವ ತಾಯಿ ಮೊದಲ ಗುರುವಾಗುತ್ತಾಳೆ. ಮಗುವಿಗೆ ಅಕ್ಷರಜ್ಞಾನ ಪ್ರಾರಂಭವಾದ ಕೂಡಲೆ ಅಕ್ಷರ ಕಲಿಸುವಾತನು ಗುರುವಿನ ಸ್ಥಾನದಲ್ಲಿ ನಿಲ್ಲುತ್ತಾನೆ. ಶಿಷ್ಯನು ಪ್ರತಿಯೊಂದನ್ನು ಚಾಚು ತಪ್ಪದಂತೆ ಕಲಿಯುವ ಹಾಗೆ ಮಾಡುವ ಗುರು ಶಿಕ್ಷಾ ಗುರುವಾಗುತ್ತಾನೆ. ಧಾರ್ಮಿಕ ಮತ್ತು ನೈತಿಕ ಆಚಾರ ವಿಚಾರಗಳನ್ನು ಜೊತೆಗೆ ಲಿಂಗದೀಕ್ಷೆಯನ್ನು ಕೊಡುವ ಗುರು ದೀಕ್ಷಾ ಗುರುವಾಗುತ್ತನೆ. ಸಂಪೂರ್ಣ ಶರಣಾಗತಿಯನ್ನು ಕುರಿತು ಹೇಳುತ್ತಾ ಶರಣಸತಿ ಲಿಂಗಪತಿ ಭಾವವನ್ನು ಬೆಳೆಸಿ ಕೊನೆಯಲ್ಲಿ ಲಿಂಗದಲ್ಲಿ ಅಂಗವನ್ನು ಹೇಗೆ ಐಕ್ಯಗೊಳಿಸಬೇಕು ಎಂದು ಕಲಿಸುವ ಗುರು ಮೋಕ್ಷಾ ಗುರುವಾಗುತ್ತಾನೆ.

ಗುರುವಿನ ಮಹತ್ವವನ್ನು ಅರಿತ ಹನ್ನೆರಡನೆಯ ಶತಮಾನದ ಶರಣರು ಅಷ್ಟಾವರಣಗಳಲ್ಲೊಂದಾದ ಪಾಧೋದಕಕ್ಕೆ ಅತ್ಯಂತ ಹೆಚ್ಚಿನ ಪ್ರಾಶಸ್ಥ್ಯವನ್ನು ನೀಡಿದ್ದಾರೆ. ಪಾಧೋದಕವನ್ನು ಸ್ವೀಕರಿಸುವಾಗ

ತನಗೆ ಪಾಧೋದಕ ನೀಡುವ ಗುರು ಅರಾಧ್ಯ ದೈವವೆಂದು ಕೆಳಗಿನ ಸಾಲುಗಳಿಂದ ಗೋಚರವಾಗುತ್ತದೆ

**"ಹರಹರ, ಕಾಲಹರ, ಕರ್ಮಹರ,ದುರಿತಹರ**
**ಪಾಪವೆಲ್ಲಾ ಪರಿಹಾರ. ಶಿಕ್ಷಾಗುರು, ಮೋಕ್ಷಾಗುರು**
**ಗುರುವಿನ ಗುರು ಪರಮಗುರು ಪರಮಾರಾಧ್ಯ**
**ಶ್ರೀ ಗುರುವೆ ತೀರ್ಥಪ್ರಸಾದಕ್ಕೆ ನಿರೂಪಿಸಿರಿ" ಎಂದು**

ಗುರುಶಿಷ್ಯ ಪರಂಪರೆಯನ್ನು ಪರಿಶೀಲಿಸಿದಾಗ ಅತಿ ಎತ್ತರಕ್ಕೆ ಮುಟ್ಟಿದ ಹಲವಾರು ಗುರುಶಿಷ್ಯರು ಸಂಬಂಧಗಳು ನಮಗೆ ಗೋಚರವಾಗುತ್ತವೆ. ರಾಮಕೃಷ್ಣ ಪರಮಹಂಸರು ವಿವೇಕಾನಂದನ ಬರುವಿಗಾಗಿ ಕಾದು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ವಿವೇಕಾನಂದರ ಆದರ್ಶಗಳನ್ನು ಮೆಚ್ಚಿ ವಿದೇಶಿಯ ಮಹಿಳೆ ನಿವೇದಿತಾ ಅವರ ಶಿಷ್ಯಳಾದದ್ದು ನಾವಿಲ್ಲಿ ಸ್ಮರಿಸಬಹುದು ಕಡಕೊಳ ಮಡಿವಾಳಪ್ಪನಿಗೆ ಶ್ರೀ ಶರಣಬಸವರು ಶಿಶುನಾಳ ಶರೀಫರಿಗೆ ಗುರುಗೋವಿಂದರು ಶ್ರೇಷ್ಟ ಗುರುವಾಗಿ ಮೆರೆದರು.

ದ್ರೋಣಾಚಾರ್ಯರ ಮತ್ತು ಏಕಲವ್ಯನನ್ನು ಕುರುತಾಗಿ ನೋಡಿದಾಗ ರಾಜ್ಯಗುರುವಾದ ದ್ರೋಣಾಚಾರ್ಯರು ರಾಜ್ಯಕುವರನಲ್ಲಿದ್ದ ಏಕಲವ್ಯನಿಗೆ ಬಿಲ್ವಿದ್ದೆಯನ್ನು ಕಲಿಸಲು ನಿರಾಕರಿಸುತ್ತಾರೆ. ಆಗ ಏಕಲವ್ಯನು ಒಂದು ಕಲ್ಲನ್ನು ದ್ರೋಣಾಚಾರ್ಯರೆಂದು ಭಾವಿಸಿ ಬಿಲ್ವಿದ್ದೆಯನ್ನು ಕಲಿಯುತ್ತಾನೆ. ಇವನ ಬಿಲ್ವಿದ್ದೆಯನ್ನು ಕಂಡ ದ್ರೋಣಾಚಾರ್ಯರು ಒಂದಲ್ಲ ಒಂದು ದಿನ ಇವನು ಅರ್ಜುನನಿಗೆ ಪ್ರತಿಸ್ಪರ್ಧಿಯಾಗುವುದರಲ್ಲಿ ಸಂದೇಹವಿಲ್ಲ ಎಂದರಿತು ಗುರುದಕ್ಷಿಣೆಯಾಗಿ ಏಕಲವ್ಯನ ಹೆಬ್ಬೆರಳನ್ನು ತೆಗೆದುಕೊಳ್ಳುತ್ತಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಗುರುದಕ್ಷಿಣೆಯಾಗಿ ತನ್ನ ಹೆಬ್ಬರಳನ್ನೆ ಕತ್ತರಿಸಿಕೊಟ್ಟ ಶಿಷ್ಯನ ಶ್ರೇಷ್ಟತೆ. ಮಹಾಭಾರತದ ಕೌರವ ಮತ್ತು ಪಾಂಡವರ ಯುದ್ಧ ದುಷ್ಟ ಮತ್ತು ಶಿಷ್ಟ ಶಕ್ತಿಯ ನಡುವೆ ನಡೆದ ಒಂದು ಮಹಾಸಮರ. ಶಿಷ್ಟಶಕ್ತಿಗೆ ಬೆಂಗಾವಲಾಗಿ ನಿಂತ ಶ್ರೀಕೃಷ್ಣ ಅರ್ಜುನನ ಸಾರಥಿಯ ರೂಪದಲ್ಲಿ ಗುರುವಾಗಿ ನಿಂತು ದುಷ್ಟ ಶಕ್ತಿಯನ್ನು ಸಂಹರಿಸಿದೆ.

ಹನ್ನೆರಡನೆಯ ಶತಮಾನದ ಶರಣ ಸಾಹಿತ್ಯವನ್ನು ನೋಡಿದಾಗ ಬಸವಣ್ಣನಿಗೆ ಜಾತವೇದ ಮುನಿಗಳು, ಅಲ್ಲಮಪ್ರಭುವಿಗೆ ಅನಿಮಿಷ, ಅಕ್ಕಮಹಾದೇವಿಗೆ ಚೆನ್ನಮಲ್ಲಿಕಾರ್ಜುನ, ಹಾವಿನಹಾಳ ಕಲ್ಲಯ್ಯನಿಗೆ ಸಿದ್ದರಾಮ, ಸಿದ್ಧರಾಮರಿಗೆ ಅಲ್ಲಮಪ್ರಭುಗಳು, ಮುಕ್ತಾಯಕ್ಕನಿಗೆ ಅಜಗಣ್ಣ ಗಂಗಾಂಬಿಕೆ ನೀಲಾಂಬಿಕೆಯರಿಗೆ ಬಸವಣ್ಣ ಮುಂತಾದ ನಿದರ್ಶನಗಳು ಕಂಡು ಬರುತ್ತವೆ.

ಇದೆಲ್ಲಕ್ಕು ಮಿಗಿಲಾಗಿ ನಮ್ಮ ಆರಾಧ್ಯ ದೈವವಾದ ಶರಣಬಸವರು ಮತ್ತು ಗುರು ಮರುಳಾದ್ಯರು ದೇಹವೆರಡು ಆತ್ಮವೊಂದು ಎನ್ನುವ ಭಾವವನ್ನು ಮೆರೆದಿದ್ದಾರೆ. ಶರಣಬಸವರು ಮತ್ತು ಮರಳಾರಾಧ್ಯರು ಎರಡು ಮುಖಗಳಾದರು ಆತ್ಮ ಒಂದು ಎನ್ನುವ ಭಾವ ಹೊಂದಿದ್ದರಿಂದ ಅದೇ ಭಾವದಲ್ಲಿ ಅದ್ವೈತಶಕ್ತಿಗಳ ಪುತ್ಥಳಿಯನ್ನು ಸ್ಥಾಪಿಸಿದ್ದು ಗುರು ಶಿಷ್ಯರ ಸಂಬಂಧಕ್ಕೆ ಇಡೀ ಮಾನವ ಕುಲಕೋಟಿಗೆ ಒಂದು ಜೀವಂತ ಉದಾಹರಣೆ. ಗುರುಶಿಷ್ಯರ ಶ್ರೇಷ್ಟ ಸಂಬಂಧಕ್ಕೆ ಇದಕ್ಕಿಂತ ಮತ್ತೊಂದು ಉದಾಹರಣೆ ಬೇಕಾಗಿಲ್ಲ. ಗುರುವಿನ ಮಹತ್ವವನ್ನು ಕುರಿತಾಗಿ ಬಸವಣ್ಣನವರ ಒಂದು ವಚನ ಇಂತಿದೆ

**ಗುರುವಚನವಲ್ಲದೆ ಲಿಂಗವೆಂದೆನಿಸದು,**
**ಗುರುವಚನವಲ್ಲದೆ ನಿತ್ಯವೆಂದೆನಿಸದು,**
**ಗುರುವಚನವಲ್ಲದೆ ನೇಮವೆಂದೆನಿಸದು,**
**ತಲೆಇಲ್ಲದ ಅಟ್ಟೆಗೆ ಪಟ್ಟವ ಕಟ್ಟುವ**
**ಉಭಯ ಭ್ರಷ್ಟರ ಮೆಚ್ಚುವನೆ.**
**ನಮ್ಮ ಕೂಡಲಸಂಗಮದೇವ.**

ಶಿವಯೋಗದ ಸಾಧನೆಯ ಮೂಲ ನಾವು ಕಟ್ಟಿಕೊಳ್ಳುವ ಆತ್ಮಲಿಂಗ. ಈ ಲಿಂಗವನ್ನು ಅನುಗ್ರಹಿಸುವವನು ಗುರು. ಲಿಂಗವು ದೀಕ್ಷಾಬದ್ಧವಾಗಿ ದೊರಕದ ಹೊರತು ಅದು ಲಿಂಗವಾಗುವುದಿಲ್ಲ. ಗುರುವಚನವಿಲ್ಲದೆ ಮಾಡುವ ನಿತ್ಯ ಪೂಜೆ ಪೂಜೆಯೆಂದೆನಿಸುವುದಿಲ್ಲ. ಲಿಂಗವನ್ನು ಕರಸ್ಥಲದಲ್ಲಿದ್ದು ಅದನ್ನೇ ದೃಷ್ಟಿಸುವ ನೇಮ ನೇಮವಾಗುವುದಿಲ್ಲ. ಜ್ಞಾನವಿಲ್ಲದ ಗುರು, ಅಜ್ಞಾನಿ ಶಿಷ್ಯನಿಗೆ ಲಿಂಗವನ್ನು ಕಟ್ಟಿದರೆ ಅವರಿಬ್ಬರು ಭ್ರಷ್ಟರು ಅವರಿಗೆ ಯಾವತ್ತಿಗು ದೈವೀಕೃಪೆಯಾಗುವುದಿಲ್ಲವೆಂದು ಬಸವಣ್ಣನವರು ಹೇಳಿದ್ದಾರೆ.

**ಸಿದ್ದರಾಮರು ತಮ್ಮ ಒಂದು ವಚನದಲ್ಲಿ**
**"ಸಂತೆಯೊಳಗಿದ್ದ ಕಲ್ಲುಗಳೆಲ್ಲಾ ಲಿಂಗವೇನೊ ಅಯ್ಯಾ?**
**ಪರ್ವತ ವಾರಣಾಸಿ ಬದರಿಕಾ ಕ್ಷೇತ್ರಂಗಳಲ್ಲಿದ್ದ**
**ಕಲ್ಲುಗಳೆಲ್ಲಾ ಲಿಂಗವೆನೋ ಅಯ್ಯಾ?**
**ಅಂತಕಾಂತಕ ಶ್ರೀ ಗುರುಮೂರ್ತಿ ತನ್ನರುಹಿನ ರೂಪವಿಂತೆಂದು**
**ತೋರಿದ ಕೃತಿ ನಿಜಲಿಂಗ ನೋಡಾ**
**ಕಪಿಲಸಿದ್ಧ ಮಲ್ಲಿಕಾರ್ಜುನಾ**

ಸ್ಥಾವರಲಿಂಗದ ಆರಾಧಕರಾ ಸಿದ್ದರಾಮರು ಅಲ್ಲಮಪ್ರಭಗಳಿಂದ ಲಿಂಗದೀಕ್ಷೆಯಾದ ನಂತರ ಸ್ಥಾವರಲಿಂಗಗಳನ್ನು ಸಂತೆಯೋಳಗಿನ ಕಲ್ಲು ಎಂದಿದ್ದಾರೆ. ಯಮನನ್ನು ಗೆಲ್ಲವ ಸಾಮರ್ಥ್ಯ ಹೊಂದಿದ ಗುರು ತನ್ನರುಹಿನ ರೂಪ ಎಂದು ನೀಎಇದ ಲಿಂಗ ಎನ್ನುವ ಮಾತನ್ನ ಹೇಳಿದ್ದಾರೆ.

ಗುರುವಚನದಿಂದ ಸಂಸಾರಪಾಶ ಹರಿಯುವುದು ಕಾಮ ಕ್ರೋಧಾದಿಗಳು, ಅಷ್ಟಮದಗಳು, ದುರ್ವ್ಯಸನಗಳು ದೂರಾಗುವವು. ಗುರುವಚನದಿದ ನಮಗಂಟಿದ ಸೂತಕ ಮತ್ತು ಪಾತಕಗಳು ಬಯಲಾಗುವವು.

**ಷಣ್ಮುಖ ಶಿವಯೋಗಿಗಳು ಹೇಳುವಂತೆ**
**ಗುರುವಚನದಿಂದಲ್ಲದೆ ಭವಪಾಶ ಹರಿಯದು.**
**ಗುರುವಚನದಿಂದಲ್ಲದೆ ಜಾತಿ ಭೇದ ಮಾಣದು**
**ಗುರು ವಚನದಿಂದಲ್ಲದೆ ಸೂತಕ ಪಾತಕಗಳುಕೆಡ ಬಿಡವು**
**ಗುರು ವಚನದಿಂದಲ್ಲದೆ ಅಂಗಮನ ಪ್ರಾಣಂಗಲು ಶುದ್ಧವಾಗಲರಿಯವು**
**ಗುರು ವಚನದಿಂದಲ್ಲದೆ ಲಿಂಗಕ್ಕೆ ಕಳೆವೇದಿಸದು**
**ಗುರುವಚನದಿಂದಲ್ಲದೆ ಸದ್ ಭಕ್ತಿ ನೆಲೆಗೊಳ್ಳದು**
**ಗುರುವಚನದಿಂದಲ್ಲದೆ ನಿಜಮುಕ್ತಿ ಕಾಣಬಾರದು**
**ಇದು ಕಾರಣ ಗುರುಮುಟ್ಟಿ ಗುರುವಾದ ಪರಮಶರಣರ**
**ಶ್ರೀ ಚರಣಕ್ಕೆ ಶರಣು ಶರಣೆಂಬನಯ್ಯಾ ಅಖಂಡೇಶ್ವರಾ**

ಎಂದರೆ,
ಗುರುವಚನದಿಂದ ಸಂಸಾರಪಾಶ ಹರಿಯುವುದು ಕಾಮ ಕ್ರೋಧಾದಿಗಳು ಅಷ್ಟಿಮದಗಳು ದುರ್ವ್ಯಸನಗಳು ದೂರಾಗುವವು. ಗುರುವಚನದಿಂದ ನಮಗಂಟಿದ ಸೊತಕೆ ಪಾತಕಗಳು ಬಯಲಾಗುವವು.

ಗುರುವಚನದಿಂದ ಅಂಗವು ಲಿಂಗವಾಗುತ್ತದೆ. ಮನವೆ ಅರಿವಾಗುತ್ತದೆ. ಪ್ರಾಣವು ಲಿಂಗಪ್ರಾಣವಾಗುವುದು, ಗುರುವಚನದಿಂದ ಕಟ್ಟಿದ ಲಂಗ ನೆಲೆಗೊಳ್ಳುವುದು. ಜೊತೆಗೆ ಸದ್ಭಕ್ತಿ ನೆಲೆಗೊಳ್ಳುವುದು ಮತ್ತು ನಿಜಮುಕ್ತಿ ದೊರೆಯುವದು ಎಂದು ಷಣ್ಮುಖ ಶಿವಯೋಗಿಗಳು ನುಡಿದಿದ್ದಾರೆ.

**ಚೆನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ**
**ಯಾಂತ್ರಿಕನ ಯಂತ್ರ ಮಂತ್ರ ಸಂಬಂಧದಿಂದ**
**ಪಿಶಾಚಗ್ರಸ್ತನ ಪಿಶಾಚಿಯು ಪಲಾಯನವಪ್ಪ ತೆರನಂತೆ,**
**ಶ್ರೀ ಗುರುವಿನ ಶಿವಮಂತ್ರ ಶಿವಲಿಂಗ ಸಂಬಂಧದಿಂದ**
**ಮನುಜನ ಮಾಯಾಗ್ರಹವು ತೊಲಗಾವುದಯ್ಯಾ**

**ಗಿಡಮರ ಬಳ್ಳಿಗಳ ನಾರು ಬೇರುಗಳ ಶರಿರದೊಂಡೆಯಲ್ಲಿ ಧರಿಸಿದಡೆ ರೋಗಿಯ ಹಲವು ರೋಗಗಳು ನಷ್ಟವಪ್ಪ ಪರಿಯಂತೆ**
**ಇಷ್ಟಲಿಂಗ ವನೆಂಗದಲ್ಲಿ ಸಂಗ್ಗೋಳಿಸುವುದರಿಂದ**
**ಭವಿಯ ಭವಕೆಟ್ಟು ಕೂಡಲ ಚೆನ್ನಸಂಗಯ್ಯನ ಕಾರುಣ್ಯಕ್ಕೆ ಪಕ್ಕಾಗುವನಯ್ಯಾ ಎಂದಿದ್ದಾರೆ**

ಈ ವಚನದ ತಾತ್ಪರ್ಯವೆಂದರೆ ಯಾಂತ್ರಿಕನ ಯಂತ್ರದಿಂದ ಯಾರಿಗೆ ಪಿಶಾಚಿ ಹಿಡಿದಿರುತ್ತದೆಯೋ ಆ ಪಿಶಾಚಿ ದೂರವಾಗುತ್ತದೆ. ಅದೇ ತೆರನಾಗಿ ಶ್ರೀ ಗುರುವಿನ ಸಂಬಂಧದಿಂದ ಶಿವಲಿಂಗ ಮತ್ತು ಶಿವಮಂತ್ರ ಪ್ರಾಪ್ತವಾಗುತ್ತದೆ. ಗಿಡಮೂಲಿಕೆಯ ಔಷಧಗಳನ್ನು ಸೇವಿಸಿದಾಗ ರೋಗಗಳು ದೂರವಾಗುವಂತೆ ಇಷ್ಟಲಿಂಗವನ್ನು ಧರಿಸುವುದರಿಂದ ಭವಬಂಧನಗಳು ದೂರಾಗಿ ದೇವರ ಕೃಪೆಗೆ ಪಾತ್ರನಾಗುತ್ತಾನೆ ಎಂದು. ಪೂಜ್ಯ ಅಪ್ಪಾಜಿಯವರ ಒಂದು ದಾಸೋಹ ಸೂತ್ರದಲ್ಲಿ ಶಿವಪಥ ಅರಿವೊಡೆ ಗುರುಪಥ ಮೊದಲು" ಎಂದು ಹೇಳಲಾಗಿದೆ ಶಿವನ ಬಗ್ಗೆ ಮತ್ತು ಶಿವಪಥದ ಬಗ್ಗೆ ತಿಳಿದುಕೊಳ್ಳಬೇಕಾದರೆ ಮೊದಲು ಗುರು ಬೇಕು. ಗುರುವಿನ ದರ್ಶನವಾದ ಮೇಲೆ ಆಗುರು ಶಿವನ ದರ್ಶನವನ್ನು ಮಾಡಿಸುತ್ತಾನೆ. ನಮ್ಮ ಆತ್ಮದಲ್ಲಿಯೆ ಶಿವನಿದ್ದಾನೆ ಎಂದು ಗೋಚರವಾಗುವುದು ಗುರುದರ್ಶನದಿಂದ ಮಾತ್ರ. ಅದ್ದರಿಂದ ನಮ್ಮ ಆತ್ಮದಲ್ಲಯ ಪರಮಾತ್ಮನನ್ನು ಗುರುತಿಸಿಕೊಳ್ಳುವ ಶಕ್ತಿಯನ್ನು ಕೊಡುವ ಗುರು ಅತ್ಯಂತ ಶ್ರೇಷ್ಠ ಎನ್ನುವ ಮಾತು ಪೂಜ್ಯರ ಸೂತ್ರದಲ್ಲಿ ಅಡಕಗೊಂಡಿದೆ.

**ಪೂಜ್ಯರ ಇನ್ನೊಂದು ಸೂತ್ರದಲ್ಲಿ**
**"ದೇವರಿಗಿಂತ ತಾಯಿ ಅಧಿಕ**
**ದೇವರಿಗಿಂತ ತಂದೆ ಅಧೀಕ**
**ದೇವರಿಗಿಂತ ಗುರು ಅಧಿಕ"**

ಎಂದು ನಿವೇದಿಸಲಾಗಿದೆ. ಮಗುವಿನ ಏಳಿಗೆ ಹಲವಾರು ಏರಿಳಿತಗಳನ್ನು, ನೋವುಗಳನ್ನು ಅನುಭವಿಸುವ ಎಲ್ಲವನ್ನು ತ್ಯಾಗ ಮಾಡುವ ತಾಯಿ ದೇವರಿಗಿಂತ ಅಧಿಕವಾದರೆ ಮಗುವಿನ ಭವಿಷ್ಯತ್ತಿಗಾಗಿ ತಂದೆಯು ಸಹ ಅಷ್ಟೇ ಪ್ರಮುಖನಾಗುತ್ತಾನೆ. ತಾಯಿ ಸಹನೆ, ಪ್ರೀತಿ, ತ್ಯಾಗಗಳನ್ನು ಕಲಿಸಿದರೆ ತಂದೆ ಶಿಸ್ತು, ಕಠಿಣಪರಿಶ್ರಮ, ಧೈರ್ಯ, ಸಾಹಸವನ್ನು ಕಲಿಸುತ್ತಾನೆ. ಹೀಗೆ ತಂದೆ ತಾಯಿಗಳು ದೇವರಿಗಿಂತ ಅಧಿಕವೆಂದು ಹೇಳುತ್ತಾ 'ಗುರು' ದೇವರಿಗಿಂತಲು ಮೇಲು ಎಂಬುದು ಅಪ್ಪನವರ ಅಭಿಪ್ರಾಯ. ಮರದೊಳಗೆ ಅಗ್ನಿ ಇದೆ ಎನ್ನುವುದು ಮರಕ್ಕೆ ಗೊತ್ತಾಗುವುದಿಲ್ಲ. ಹಾಗೆಯೆ ನಮ್ಮಲ್ಲಿ ಪರಮಾತ್ಮನಿದ್ದಾನೆ ಎನ್ನುವ ಸತ್ಯ ಗುರುವಿಲ್ಲದೆ ತಿಳಿಯುವುದಿಲ್ಲ. ಜೀವನದುದ್ದಕ್ಕು ಒಳ್ಳೆಯ ಮಾರ್ಗವನ್ನು ತೋರುವ ಗುರು ದೇವರಿಗಿಂತ ಅಧಿಕವೆನ್ನುವುದು ಪೂಜ್ಯ ಅಪ್ಪಾಜಿಯವರ ನಿಲುವಾಗಿದೆ.

**ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ**
**ಒಳಗೆ ಶೋದಿಸಿ ಹೊರಗೆ ಶುದ್ಧಯಿಸಿ;**
**ಒಳಹೊರಗೆಂಬ ಉಭಯ ಶಂಕೆಯ ಕಳೆದು.,**
**ಸ್ಪಟಿಕದ ಸಲಾಕೆಯಂತೆ ತಳವೆಳಗು ಮಾಡಿ**
**ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ ಶಿಷ್ಯನ ಸರ್ವ ಪ್ರಪಂಚ ನಿವೃತ್ತಿಯಂ ಮಾಡಿ ನಿಜೋಪದೇಶವಿತ್ತು**
**ಆ ಶಿಷ್ಯನ ನಿಜದಾದಿಯ ನೈದಿಸುವವನೀಗ ಜ್ಞಾನಗುರು, ಆ ಸಹಜ ಗುರುವಿಗ**
**ಜಗದಾರಾಧ್ಯನು ಅವನ**
**ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚೆನ್ನಮಲ್ಲಿಕಾರ್ಜುನಾ.**

ಅಂತಂಗದಲ್ಲಿರುವ ದರ್ವಿಚಾರ ಬಹಿರಂಗದಲ್ಲಿರುವ ದುರ್ನಡನೆಗಳನ್ನು ಕಲೆದು, ಸ್ಪಟಿಕದ ಶಲಾಕೆಯಂತೆ ಅವನನ್ನು ಶುದ್ದಗೊಳಿಸಿ. ಯೋಗ್ಯಭೂಮಿಯಲ್ಲಿ ಉತ್ತಮ ಬೀಜ ಬಿತ್ತುವಂತೆ, ಒಳಹೊರಗೂ ಶುದ್ದನಾದ ಶಿಷ್ಯನಲ್ಲಿ ಒಳ್ಳೆಯ ಉಪದೇಶವನಿತ್ತು, ಆ ಶಿಷ್ಯನ ಮೂಲಸ್ವರೂಪವಾದ ಮಹಾಲಿಂಗದಲ್ಲಿ ಸಮರಸಗೊಳಿಸುವವನೆ ನಿಜವಾದ ಗುರು, ಅಂತಹ ಗುರುವಿಗೆ ನಾನು ನಮೋ ನಮೋ ಎನುತಿದೆನಯ್ಯಾಎಂದು ನುಡಿಯುತ್ತಾಳೆ.

**ಅಪ್ಪಾಜಿಯವರು ರಚಿಸಿದ ದಾಸೋಹ ಸೂತ್ರ ಒಂದರಲ್ಲಿ**
**ಗುರುವಿಂಗೆ ಶರಣು ಶರಣಾರ್ತಿ ಲಿಂಗಕ್ಕೆ ಶರಣು ಶರಣಾರ್ಥಿ**
**ಜಂಗಮಕ್ಕೆ ಶರಣು ಶರಣಾರ್ಥಿ**
**ಉಪಚಾರಕಲ್ಲ ನಮಸ್ಕಾರ ಶರಣೆಂಬುದು ದಾಸೋಹವಯ್ಯಾ ಎಂದು ನುಡಿದಿದ್ದಾರೆ.**

ಸಮರ್ಪಣಾ ಭಾವದಿಂದ ಹೃದಯಕ್ಕೆ ತಟ್ಟುವಂತೆ ವಿನಿತನಾಗಿ ಶರಣಾಗುವ ಭಾವನೆ ಶರಣಾರ್ಥಿ ಆ ಶರಣಾರ್ಥಿ ಮೊದಲು ಗುರುವಿಗೆ ಸಲ್ಲಿಸಬೇಕು ಎನ್ನುವುದು ಪೂಜ್ಯ ಅಪ್ಪಾಜಿಯವರ ಸಂದೇಶವಾಗಿದೆ. ಒಳ್ಳೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವ ಅಕ್ಷರಜ್ಞಾನವನ್ನು ನೀಡುವ ಲಿಂಗದೀಕ್ಷೆ ನೀಡುವ ಮತ್ತು ಮೋಕ್ಷದ ಹಾದಿಯನ್ನು ತೋರುವ ಗುರು ಸರ್ವಶ್ರೇಷ್ಠವಾದ್ದರಿಂದ ಮೂಲವಾಗಿ ನುಡಿದಿದ್ದಾರೆ. ಗುರುವಿನ ಸ್ಥಾನವಲನಲಂಕರಿಸುವ ವ್ಯಕ್ತಿ ಸಚ್ಚಿದಾನಂದ ಸ್ವರೂಪನಾಗಿರಬೇಕು ನಿಸ್ವಾರ್ಥಿಯಾಗಿರಬೇಕು ಸದಾಶಿಷ್ಯನ ಒಳಿತು ಬಯಸಬೇಕು ಗುರುವೆಂದರೆ ಸಾಕ್ಷಾತ ಪರಶಿವನ ರೂಪವಾಗಿರಬೇಕು.ಈ ಮೌಲ್ಯಗಳು ಅವನಲ್ಲಿ ಅಳವಡದಿದ್ದರೆ ಗುರುವಿನ ಸ್ಥಾನಕ್ಕೆ ಅವನು ಯೋಗ್ಯನಲ್ಲ ಎಂದು ಹಲವಾರು ಶರಣರು ಅಭಿಪ್ರಾಯ ಪಟ್ಟಿದ್ದಾರೆ. ಅಂಬಿಗರ ಚೌಡಯ್ಯ ಹೇಳುವಂತೆ,
"ಅಡ್ಡ ಬಿದ್ದು ಶಿಷ್ಯನ ಮಾಡಿಕೊಂಬ ದಡ್ಡ ಪ್ರಾಣಿಗಳನೇನೆಂಬೆನಯ್ಯ ಏನೇನು ಅರಿಯದ ಎಡ್ಡ ಮಾನವರಿಗೆ ಉಪದೆಶದ ಮಾಡುವ ದೊಡ್ಡ ಮಾನವನ ಮುಖವ ತೋರದಿರಯ್ಯಾ ಅದೇನು ಕಾರಣವೆಂದಡೆ: ಆ ಮೂಢ ಜೀವಿಯ ಪ್ರಪಂಚವ ಕಳೆಯಲಿಲ್ಲ. ಅವನ ಪಂಚೇಂದ್ರಿಯಗಳು ಸಪ್ತವ್ಯಸನಂಗಳು, ಅಷ್ಟ ಮದಗಳೆಂಬ ಖೊಟ್ಟಿ ಗುಣಗಲ ಬಿಡಿಸಲಿಲ್ಲ. ಸೂತಕ ಪಾತಕಂಗಳ ಕೆಡಿಸಿ ಮೂರು ಮಲಂಗಳ ಬಿಡಿಸಿ ಮುಕ್ತಿಪಥವನರುಹಲಿಲ್ಲ ಮಹಾಶೂನ್ಯ ನಿರಾ ನಿರಂಜನ ಲಿಂಗವ ಕರ–ಮನ–ಭಾವ ಸರ್ವಾಂಗದಲ್ಲಿ ತುಂಬಿ ನಿತ್ಯನೆಂದೆನಿಸಲಿಲ್ಲ. ಇದನರಿಯದ ವ್ಯರ್ಥ ಕಾಯರುಗಳ ಗುರುವೆಂದಡೆ ಪ್ರಮಥರು ಮೆಚ್ಚುವರೆ? ಇಂತಪ್ಪ ಗುರು ಶಿಷ್ಯರೀರ್ವರು ಅಜ್ಞಾನಿಗಳು ಅವರು ಇಹಲೋಕ ಪರಲೋಕಕ್ಕೆ ಹೊರಗೆಂದಾತ ನಂಬಿಗರ ಚೌಡಯ್ಯ.

ತಾನು ಗುರು ಎಂದು ಹೇಳಿ ಅಜ್ಞಾನಿಗಳನ್ನು ಶಿಷ್ಯನನ್ನಾಗಿಸಿಕೊಳ್ಳುವ ಡಾಂಭಿಕ ಗುರು ಗುರುವಾಗುವುದಿಲ್ಲ ಅಂತಹವರ ಮುಖವನ್ನು ನನಗೆ ತೋರದಿರು ಏಕೆಂದರೆ ಆ ಮೂಢ ಗುರು ದುಷ್ಕರ್ಮವನ್ನು ಕಳೆಯಲಿಲ್ಲ ಪಂಚೇಂದ್ರಿಯಗಳ ನಿಗ್ರಹವನ್ನು ತಿಳಿಯಪಡಿಸಲಿಲ್ಲ. ಸಪ್ತವ್ಯಸಗಳಾದ ತನು, ಮನ, ಧನ, ರಾಜ್ಯ, ಉತ್ಸಾಹ, ಸೇವಕ ಮತ್ತು ಸ್ತ್ರೀ ವ್ಯಸನಗಳನ್ನು ಕುಲ, ಛಲ, ಧನ, ರೂಪ ಯೌವನ ವಿದ್ಯೆ ರಾಜ, ತಪಸ್ಸು ಎಂಬ ಅಷ್ಟಮದಗಳನ್ನು ದೂರಮಾಡಲಿಲ್ಲ. ಸೂತಕ ಪಾತಕಗಳನ್ನು ದೂರಮಾಡಲಿಲ್ಲ ಅಂಗಾಂಗ ಸಾಮರಸ್ಯವನ್ನು ತಿಳಿಹೇಳಲಿಲ್ಲ ಇಂತಹ ವ್ಯರ್ಥ ಕಾಯರುಗಳನ್ನು ಗುರುವೆಂದರೆ ಪ್ರಮಥರು ಮೆಚ್ಚುವುದಿಲ್ಲ. ಈ ಗುರುಶಿಷ್ಯರಿಬ್ಬರು ಅಜ್ಞಾನಿಗಳು, ಇವರು ಇಹಪರಕ್ಕೆ ದೂರ ಎಂದು ಅಂಬಿಗರ ಚೌಡಯ್ಯಾ ತನ್ನ ವಚನದಲ್ಲಿ ಹೇಳುತ್ತಾನೆ.

ಶರಣರು ದೈವೀಕಶಕ್ತಿಯನು ಅರಾಧಿಸುವುದರ ಜೊತೆಗೆ ನಿಸರ್ಗವನ್ನು ಆರಾಧೀಸಿದ್ದಾರೆ. ನಿಸರ್ಗವು ಸಹ ವ್ಯಕ್ತಿಯ ಜೀವನದಲ್ಲಿ ಗುರುವಾಗಿ ನಿಲ್ಲುತ್ತದೆ ಎಂದು ಹೇಳುತ್ತಾ. 'ಗುರು' ಎನ್ನುವ ಶಬ್ದಕ್ಕೆ ವಿಶಾಲವಾದ ಅರ್ಥ ಕಲಿಸಿದ್ದಾರೆ. ಇದಕ್ಕೆ ನಿದರ್ಶನವಾಗಿ ಸಿದ್ದರಾರು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

**ಪ್ರಥ್ವಿಯ ಗಣ ಕಾಂತಿ ಉದಕರ ಗುಣ ಸ್ವಾದ**
**ಅಗ್ನಿಯ ಗುಣ ಸರ್ವಭಕ್ಷಣ ವಾಯುವಿನ ಗುಣ ನಿರ್ಮಲತ್ವ**
**ಆಕಾಶದ ಗುಣ ನಿರ್ವಯಲುಇ**
**ಈ ಪರಿಚತತ್ವದ ಗುಣ ನಿನ್ನಲ್ಲಿರಲು**
**ನೀನೆ ಪಂಚಮುಖ ನೋಡಾ ಮನವೆ**
**ಕಪಿಲಸಿದ್ದ ಮಲ್ಲಿಕಾರ್ಜುನ**

ಒಳ್ಳೆಯ ಮಾರ್ಗ ತೋರುವ ಸಾಧಕರಿದ್ದಾಂ ಮೋಸ ಮಾಡುವ ಜನರಿದ್ದಾರೆ
ಭೂಮಿ ತಾಯಿಯನ್ನು ನಾವು ಶಾಂತಿ ಮತ್ತು ತಾಳ್ಮೆಗೆ ಹೋಲಿಸುತ್ತೇನೆ. ಈ ಭೂಮಿಯ ಮೇಲೆ ಸಜ್ಜನರು ಮತ್ತು ದುರ್ಜನರು ವಾಸವಾಗಿದ್ದಾರೆ. ಬಡವ ಬಲ್ಲಿದರಿದ್ದಾರೆ, ಸ್ತ್ರೀ ಪುರುಷರಿದ್ದಾರೆ, ಸುಗಂಧ ಬೀರುವ ಪುಷ್ಪವಿದೆ, ಕಾಲಿಗೆ ಚುಚ್ಚುವ ಮುಳ್ಳಿದೆ. ವಿವಿಧ ಸ್ವಭಾವದ ಪ್ರಾಣಿಗಳನ್ನು ಪಕ್ಷಿಗಳನ್ನು, ಮನುಷ್ಯನನ್ನು ಈ ಪೃಥ್ವಿ ಒಳಗೊಂಡಿದೆ, ಇಷ್ಟೆಲ್ಲ ಭೇದಗಳಿದ್ದರು ಎಲ್ಲವನ್ನು ಅಪ್ಪಿಕೊಂಡು ಎಲ್ಲರಿಗೂ ಆಶ್ರಯ ನೀಡಿದೆ. ಇಲ್ಲಿ ನಡೆಯುವ ಅನ್ಯಾಯ ಅಕ್ರಮಗಳನ್ನು ತನ್ನದೆಂದು ವೀಕ್ಷಿಸುವ ಮೂಕ ಪ್ರೇಕ್ಷಕನಂತೆ ಎಲ್ಲವನ್ನು ಸಮಚಿತ್ತವಾಗಿ ಸ್ವೀಕರಿಸಿ ನಿರ್ಲಿಪ್ತವಾಗಿರುವ ಈ ಗುಣವನ್ನು ನಾವು ಭೂಮಿಯಿಂದ ಕಲಿಯಬೇಕುಇ ಎಂದು ಸಿದ್ದರಾಮರು ಹೇಳುತ್ತಾರೆ.
ಉದಕದ ಗುಣ ಸ್ವಾದ ಎಂದರೆ ರುಚಿ ಅಷ್ಟೇ ಅಲ್ಲ ಭೂಮಿಯ ಮೇಲಿರುವ ಎಲ್ಲ ಮಲಿನವನ್ನು ತೊಳೆಯುವ ಶಕ್ತಿ ಉದಕಕ್ಕಿದೆ. ಉದಕದಿಂದ ಕಲಿಯಬೇಕಾದ ಗುಣವೆಂದರೆ ನಾವು ಎಲ್ಲರೊಡನೆ ಒಳ್ಳೆಯ ರೀತಿಯಲ್ಲಿ ಮನ ನೋಯದಂತರ ಮಾತನಾಡುವುದನ್ನು ರೂಡಿಸಿಕೊಳ್ಳಬೇಕುಇ. ಅದರೊಂದಿಗೆ ಒಳ್ಳೆಯ ಮಾತಿನಿಂದಲೆ ಜನರಲ್ಲಿರುವ ಮೌಢ್ಯತೆಯನ್ನು ಅಳಿಸಿ ಹಾಕುವ ಪ್ರಯತ್ನ ಮಾಡಬೇಕು.
ಅಗ್ನಿಯ ಗುಣ ಸರ್ವಭಕ್ಷಣ. ಎಂದರೆ, ಅಗ್ನಿಯಲ್ಲಿ ಬಿದ್ದ ಎಲ್ಲ ಪದಾರ್ಥಗಳನ್ನು ಅದು ನುಂಗಿಬಿಡುತ್ತದೆ. ಹಾಕಿದ ಕಟ್ಟಿಗೆಗಳಲ್ಲಿ ಇದು ಮಾವು,ಇದು ಬೇವು ಎಂದು ಭೇದವೆಣಿಸುವುದಿಲ್ಲ. ಅದೇ ತೆರನಾಗಿ ಮನುಷ್ಯನು ಸಹ ಲಿಂಗಬೇದ ಜಾತಿಭೇದ ವರ್ಗಬೇಧಗಳನ್ನು ತನ್ನಲ್ಲಿಯೆ ದಹಿಸಿಕೊಂಡು ಎಲ್ಲರು ಸಮಾನರೆಂದು ಮುನ್ನಡೆಯಬೇಕು.
ವಾಯುವಿನ ಗುಣ ನಿರ್ಮಲತ್ವ ಎಂದರೆ ಅದು ಏನನ್ನು ಅಂಟಿಸಿಕೊಳ್ಳುವುದಿಲ್ಲ. ಗಾಳಿಯಿಂದ ದೂಳೆದ್ದರು ಆ ಧೂಳು ಗಾಳಿಗೆ ಅಂಟುವುದಿಲ್ಲ. ಸುಗಂಧಯುತ ಪುಷ್ಪದ ಮೇಲೆ, ದುರ್ಗಧಯುಕ್ತ ವಸ್ತುವಿನ ಮೇಳೆ ಹಾಯ್ದು ಹೋದರು ಅದಾವುದನ್ನು ಅಚಿಟಿಸಿಕೊಳ್ಳುವುದಿಲ್ಲ. ಹಾಗೆಯೇ ನಾವುಗಳು ಸಹ ಸುಖ ಬಂದಾಗ ಹಿಗ್ಗದೆ. ದು:ಖ ಬಂದಾಗ ಕುಗ್ಗದೆ ಸಮಚಿತ್ತತೆಯನ್ನು ಸಿದ್ದಿಸಿಕೊಳ್ಳಬೇಕು.
ಆಕಾಶದ ಗುಣ ಬೆಳಕು, ಭೂಮಿಯ ಮೇಲೆ ಅದೇಷ್ಟೇ ಏರುಪೇರುಗಳಾದರು ಉದಯಾಸ್ತಮಾನಗಳಲ್ಲಿ ಯಾವ ಬದಲಾವಣೆಗಳು ಉಂಟಾಗುವುದಿಲ್ಲ. ಯಾವ ಏರುಪೇರುಗಳನ್ನು ಲೆಕ್ಕಿಸದ ತಮ್ಮ ಕಾಯಕದಲ್ಲಿ ತಲ್ಲೀನವಾಗುವ ಸೂರ್ಯಚಂದ್ರರಂತೆ ನಮ್ಮ ಕಾಯಕವನ್ನು ಕೈಗೊಳ್ಳಬೇಕು. ಹರಿಯುವ ನೀರು, ಬೀಸುವ ಗಾಳಿ, ಹುಟ್ಟುವ ಬೆಳಕು ಯಾವತ್ತು ವಿರಮಿಸುವುದಿಲ್ಲ ಹೀಗೆ ನಿಸರ್ಗದಲ್ಲಿರುವ ಪಂಚಬೂತಗಳು ನಮಗೆ ಅತ್ಯಂಂತ ಶ್ರೇಷ್ಠವಾದ ಗುರುವಿನ ಸ್ಥಾನದಲ್ಲಿ ನಿಲ್ಲುತ್ತವೆ ಎಂದು ಸಿದ್ದರಾಮರು ತಮ್ಮ ವಚನದಲ್ಲಿ ಹೇಳಿದ್ದಾರೆ.
ಶರಣ ಮಾರಯ್ಯ ಬಸವಣ್ಣನ ಮನೆಯಂಗಳದಿಂದ ಆಯ್ಕೆ ಅಕ್ಕಿ ಹೆಚ್ಚು ತಂದಾಗ "ನಿಮ್ಮ ಮನ ಇಮ್ಮನವೇಕಾಯ್ತು ಮಾರಯ್ಯಾ? ಇಷ್ಟೇಕೆ ಅಕ್ಕಿಯನ್ನು ತಂದಿರಿ ಹೆಚ್ಚಿನ ಅಕ್ಕಿಯನ್ನು ಅಲ್ಲಿಯೆ ಚೆಲ್ಲಿ ಬನ್ನಿ ಎಂದಾಗ ಇದು ಅಣ್ಣ ಬಸವಣ್ಣನ ಮನೆಯಕ್ಕಿ, ಹೆಚ್ಚು ಅಕ್ಕಿ ದೊರೆಯಲೆಂದೆ ಅಣ್ಣ ಬಸವಣ್ಣ ಹೀಗೆ ಮಾಡಿದಂತಿದೆ. ಒಂದು ವೇಳೆ ನಾನು ಅಕ್ಕಿಯನ್ನು ಮರಳಿ ಚೆಲ್ಲಿದರೆ ಅಣ್ಣನ ಮನ ನೋಯುವುದು ಎಂದು ಹೇಳುತ್ತಾನೆ. ಇದ್ದನ್ನು ಕೇಳಿದ ಲಕ್ಕಮ್ಮ ಹಾಗಾದರೆ ನಾಳಿನ ನಿಮ್ಮ ಕಾಯಕಕ್ಕೆ ಲೋಪ ಬರುವುದಿಲ್ಲವೆ. ನಿಮ್ಮ ಕಾಯಕಕ್ಕೆ ನೀವು ದ್ರೋಹ ಬಗೆದಂತಾಗುತ್ತದೆ ಎಂದು ಹೇಳುತ್ತಾ
"ಆಸೆ ಎಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯ ರೋಷವೆಂಬುದು ಯಮಧೂತರಿಗಲ್ಲದೆ ಅಜಾತರಿಗುಂಟೆ ಅಯ್ಯ ಈಸಕ್ತಿ ಆಸೆ ನಿಮಗೇಕಗಯ್ಯಾ? ಈಶ್ವರನೊಪ್ಪ ಮಾರಯ್ಯಾಪ್ರಿಯಾ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ" ಎಂದು ಹೇಳುತ್ತಾಳೆ.
ಆಸೆ ಎಂಬುದು ಶಿವಶರಣರಿಗಿರಬಾರದು ಎಂದು ಹೇಳುವುದರ ಜೋತೆಗೆ ಕಾಯಕ ಮಹಿಮೆಯನ್ನು ಎತ್ತಿ ತೊರಿಸಿದ್ದಾಳೆ, ಇಂದಿಂಗೆ ನಾಳಿಂಗೆ ಕೂಡಿಡುವುದು ಶರಣರಿಗೆ ಸಲ್ಲದು ಎನ್ನುವ ಉನ್ನತ ಮೌಲ್ಯಗಳನ್ನು ತಿಳಿಹೇಳಿದ ಲಕ್ಕಮ ತನ್ನ ಪತಿ ಮಾರಯ್ಯನಿಗೆ ಗುರುವಾಗುತ್ತಾಳೆ. ಆತ್ಮಜ್ಞಾನವನ್ನು ಮೂಲವಾಗಿ ಪಡೆಯಲು ಬಾಹ್ಯಗುರುವಿನ ಅವಶ್ಯಕತೆ ಇದು ಹಂತಹಂತವಾಗಿ ಮೇಲೆರಿದಂತೆ ಅತ್ಮದ ಅರಿವು ಗುರುವಾಗಿ ನಿಲ್ಲುತ್ತದೆ. ಹೀಗೆ ಬಾಹ್ಯ ಗುರುವಿನಿಂದ ಆತ್ಮಜ್ಞಾನ ಪಡೆದ ಶಿಷ್ಯ ತನ್ನ ವಿವೇಚನೆಯಿದ ಮತ್ತು ಆತ್ಮಜ್ಞಾನದಿಂದ ಅರಿವನ್ನು ಗುರುವಾಗಿಸಿಕೊಳ್ಳುತ್ತಾನೆ. ಅರಿವನ್ನು ಗುರುವಾಗಿ ಮಾಡಿಕೊಂಡ ವ್ಯಕ್ತಿ ಶರಣನಾಗುತ್ತಾನೆ ಮಹಾತ್ಮನಾಗುತ್ತಾನೆ.ಅರಿವನ್ನು ಕುರಿತ ಅಪ್ಪಾಜಿಯವರ ಒಂದು ಸೂತ್ರ ಹೀಗಿದೆ

**ಅರಿವೆ ಗುರುವೆಂದಡೆ ಶರಣ ಅಂತರಂಗದಲಿ**
**ಸರ್ವದಲೆ ದಾಸೋಹವೇ ಬೇಕು ಬಹಿರಂಗದಲಿ**
**ಅಜ್ಞಾನ ಕಳೆಯಬಹುದೆ ಅರಿವಿನಿಂದಲ್ಲದೆ**
**ಕತ್ತಲೆಯ ಕಳೆಯಬಹುದೆ ಜ್ಯೋತಿಯಿಂದಲ್ಲದೆ**
**ಶರಣಸನ್ನಿಹಿತವಾಗಿ ಅರಿವಿನಿಂದ ಅನುಭವ ವಚನಗಳಾದವು**
**ಅರಿವೆ ಗುರುವೆಂದರಿದು ಬೆಳಗಲಿ ಜಗದಲ್ಲಿ**
**ಮಹಾದಾಸೋಹಿ ಶರಣಬಸವ**

ಶರಣನು, ಅಂತರಂಗದಲ್ಲಿ ಅರಿವೆ ಗುರುವೆಂದಿತು ಬಹಿರಂಗದಲ್ಲಿ ಮಾಡುವ ಪ್ರತಿ ಕಾಯಕವು ದಾಸೋಹವಾಗುತ್ತದೆ. ಜ್ಯೋತಿಯಿಂದ ಕತ್ತಲೆಯನ್ನು ಕಳೆಯುವಂತೆ ಅರಿವಿನಿಂದ ಅಜ್ಞಾನ ಕಳೆಯುತ್ತದೆ. ಶರಣರ ಸತ್ಸಂಗದಿಂದ ಉಪನಿಷತ್ತುಳಾದವು ವಚನಗಳು ರಚನೆಗೊಂಡವು. ಆದ್ದರಿಂದ ಅರಿವನ್ನು ಬೆಳಗಿಸಿಕೊಂಡು ಆ ಅರಿವು ಬಹಿರಂಗದಲ್ಲಿ ಕ್ರಿಯಾರೂಪವಾಗಿ ಜಗವೆಲ್ಲ ಬೆಳಗಲಿ ಎಂದು ಶರಣಬಸವನಲ್ಲಿ ಪ್ರಾರ್ಥನೆಗೈಯುವದನ್ನು
ಸಿದರಾಮರ ಒಂದು ವಚನದಲ್ಲಿ ಅಪ್ಪಾಜಿಯವರ ದಾಸೋಹ ಸೂತ್ರದಲ್ಲಿ ಕಂಡುಕೊಳ್ಳುತ್ತೇವೆ ಮನವೆಂಬುದು ಬೇರಿಲ್ಲ; ಮಹಾದೇವನ ಮಹಾ ಅರುಹು ನೋಡಾ ಸಂಕಲ್ಪ ವಿಕಲ್ಪಗಳ ಧರಿಸಿದಲ್ಲಿ ಮನವೆನಿಸಿತ್ತು: ಅದು ಅಳಿದಲ್ಲಿ ಮಹಜ್ಞಾನವೆನಿಸಿತ್ತು? ಅಳಿದ ಭಾವ ತತಿದೋರಿದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನೆನಿಸಿತ್ತು ಎಂದಿದ್ದಾರೆ
ಶರಣರ ಅಭಿಪ್ರಾಯದಲ್ಲಿ ವ್ಯಕಿಯ ಮುಖ್ಯ ಗುರು ಎಂದರೆ ದೇವ ಸಾಕ್ಷಾತ್ಕಾರ ಆತ್ಮಜ್ಞಾನದಿಂದ ದೈವೀಶಕ್ತಿಯನ್ನು ಗೆದ್ದವನೆ ಶ್ರೇಷ್ಟ ಮಾನವ ಈ ನಿಟ್ಟಿನಲ್ಲಿ ಸಿದ್ದರಾಮರ ಮೇಲಿನ ವಚನಗಳನ್ನು ಅರುಹಲಾಗಿದೆ. ಸಂಕಲ್ಪ ವಿಕಲ್ಪಗಳು ಇದ್ದಲ್ಲಿ ಮನವಾಗುತ್ತದೆ. ಈ ಉಭಯಗಳನ್ನು ಅಳಿದಾಗ ಮಹಾಜ್ಞಾನಿಯಾಗಿ ಮಹಾದೇವನ ಅರುಹ ಕಂಡುಕೊಳ್ಳುತ್ತದೆ. ಕಂಡುಕೊಳ್ಳುತ್ತದೆ.
ಇಂದ್ರೀಯಗಳನ್ನು ವ್ಯಥೆಗೊಳಿಸದೆ (ವ್ಯಸನಗೊಳಿಸದೆ) ಅವುಗಳನ್ನು ನಿಗ್ರಗಿಸುವುದು ಸಾಧಕನ ಆದ್ಯ ಕರ್ತವ್ಯ, ಮನಸ್ಸಿನಲ್ಲಿ ವಿಷಯಸುಖಗಳನ್ನು ಅದುಮಿಟ್ಟುಕೊಂಡು ಹೊರಗೆ ಇಂದ್ರೀಯಗಳನ್ನು ಕೃತಕವಾಗಿ ನಿಗ್ರಹಿಸುವುದು ಅಪಾಯಕಾರಿ, ಅವುಗಳನ್ನು ವ್ಯಸನಗೊಳಿಸಿದಷ್ಟು ಭೂತಾಕಾರವಾಗಿ ಪರಿಪರಿಯಾಗಿ ಕಾಡುವವು. ಅಂತಹ ಸಂದರ್ಭದಲ್ಲಿ ಜೀವನ ಅಡ್ಡಹಾದಿ ಹಿಡಿಯಬಹುದು. ಆದುದರಿಂದ ಶರಣರು ಸಹಜವಾಗಿ ಬದುಕುವ ಅರುಹಿನ ದಾರಿಯನ್ನು ಹೇಳಿಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಬಸವಣ್ಣನ ಒಂದು ವಚನ ಇಂತಿದೆ ಇಂದ್ರಿಯ ನಿಗ್ರಹವ ಮಾಡಿದಡೆ

ಹೊಂದುವವು ದೋಷಂಗಳು ಮುಂದೆ ಒಂದು ಕಾಡುವವು ಪಂಚೇಂದ್ರಿಯಗಳು ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ ಚಂಗಳಾಯರು ಸತಿಪತಿರತಿಭೋಗೋಪಬೇಗ ವಿಳಾಸವ ಬಿಟ್ಟನೇ ಸಿಂಧುಬಲ್ಲಾಳನು? ನಿಮ್ಮ ಮುಟ್ಟಿ ಪರದನ ಪರಸತಿಯರಿಗೆಳೆಸಿದಡೆ ನಿಮ್ಮ ಚರಣಕ್ಕೆ ದೂರ, ಕೂಡಲಸಂಗಮದೇವ ಸಿರಿಯಳ ಚಂಗಳೆಯರು ಸಿಂಧುಬಲ್ಲಾಳನು ದಂಪತಿಗಳಾಗಿ ಸಂಸಾರ ಸುಖವನ್ನು ಅನುಭವಿಸಿದರು. ಸಂಸಾರದಲ್ಲಿ ಯಾವುದು ತಾಜ್ಯವಲ್ಲ. ಅದರದರ ಸ್ಥಾನವನ್ನು ಅದಕ್ಕೆ ಕೊಟ್ಟು ಅದರ ಮಿತಿಯನ್ನು ಕಂಡುಕೊಂಡು ಮೇಲೆರಬೇಕು. ಯಾವುದು ಅತಿಯಾಗಿ ವಿಕೃತವಾಗದೆ ಮಿತವಾರಬೇಕು ಎನ್ನುವ ಜೀವನದ ಸಾರ್ಥಕತೆಯನ್ನು ಬಸವಣ್ಣನವರು ಹೇಳಿದ್ದಾರೆ. ಈನ ಅರುಹಿನಿಂದ ಪ್ರಪಂಚದಲ್ಲಿದ್ದು ಪಾರಮಾರ್ಥ್ಯವನ್ನು ಸಾಧಿಸಬೇಕೆಂದು ನುಡಿಯುತ್ತಾರೆ.

**ಮೋಳಿಗೆ ಮಾರಯ್ಯನ ಒಂದು ವಚನದಲ್ಲಿ**
**ಆನೆ, ಕುದುರೆ, ಬಂಡಿ, ಭಂಡಾರವಿರ್ದಡೇನೋ**
**ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು,**
**ಕುಡಿಯುವುದೊರತೆ ನೀರು, ಮಲಗುವುದರ್ಧ ಮಂಚ**
**ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ**
**ಒಡಲು ಭೂಮಿಯ ಸಂಗ, ಪ್ರಾಣ ವಾಯುವಿನ ಸಂಗ**
**ಕೈವಿಡಿದ ಮಡದಿ ಪರರ ಸಂಗ, ಒಡವೆ ತಾನೇನಪ್ಪುದೊ?**
**ಸಾವಿಂಗೆ ಸಂಗಡವಾರು ಎಲ್ಲ ಕಾಣಾ ನಿಃಕಳಂಕ ಮಲ್ಲಿಕಾರ್ಜುನಾ**

ಒಂದು ಕಾಲದಲ್ಲಿ ಅರಸನಾಗಿದ ಮಾರಯ್ಯ ತನ್ನ ಗತವೈಭವವನ್ನು ನೆನೆಸಿ ಮನುಷ್ಯನಲ್ಲಿ ಎಷ್ಟೇ ಐಶ್ವರ್ಯವಿದ್ದರು ಉಣ್ಣುವುದು ಹಿಡಿಯಕ್ಕಿ ಕುಡಿಯುವುದು ಒಂದಾಳಕರ ಹಾಲು, ಬೊಗಸೆಯಷ್ಟು ನೀರು ಕುಡಿಯಲು ಅರ್ಥ ಮಂಚ ಮಲಗಲು ಬೇಕು ಆದೂರೂ ನಾವುಗಳು ಸಿರಿಯನ್ನು ಮೆಚ್ಚಿ ಕೆಡುತಿದ್ದೇವೆ ಎಂದು ಹೇಳುತ್ತಾ, ಸಾವಿನ ನಂತರ ನಮ್ಮ ದೇಹ ಭೂಮಿಯ ಪಾಲಾಗುತ್ತದೆ. ಪ್ರಾಣ ಗಾಳಿಯಲ್ಲಿ ಬೆರೆಯುತ್ತದೆ. ಕೈಹಿಡಿದ ಹೆಂಡತಿ ಪರರ ವಶವಾಗುತ್ತಾಳೆ. ಸಾಯುವಾಗ ನಮ್ಮ ಜೊತೆ ಯಾರುಬರುವುದಿಲ್ಲಾ ಈ ಸತ್ಯದ ಅರಿವು ಪ್ರತಿಯೊಬ್ಬರಲ್ಲು ಮೂಡಬೇಕು ಎಂದು ಹೇಳತ್ತಾರೆ.

**ಪ್ರಭುದೇವರು ತಮ್ಮ ಒಂದು ವಚನದಲ್ಲಿ**
**ಕೊಟ್ಟ ಕುದುರೆಯನೇರಲರಿಯದೆ**
**ಮತ್ತೊಂದ ಕುದುರೆಯನೇರಬಯಸುವರು ವೀರರು ಅಲ್ಲ ಧೀರರೂ ಅಲ್ಲ**
**ಇದು ಕಾರಣ ನೇರೆ ಮೂರು ಲೋಕವೆಲ್ಲವು ಹಲ್ಲಣವ ಹೊತ್ತುಕೊಂಡು ತೊಳಲುತ್ತ ಇದ್ದಾರೆ**
**ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರು ಎಂದಿದ್ದಾರೆ**

ತನ್ನಲಿದ್ದು ತಿಳಿದು ಅದಕ್ಕನುಗುಣವಾಗಿ ತನ್ನ ಜೀವನವನ್ನು ರೂಪಿಸಿಕೊಂಡರೆ ಅವನಷ್ಟುಸುಖ ಯಾರು ಅಲ್ಲಾ ಅದನ್ನು ಖದಿರಿಗಿಟ್ಟು ತನ್ನಲಿರದಿದ್ದುದಕ್ಕೆ ವ್ಯದೆ ಪಟ್ಟು ತನ್ನ ಸುಖ ಸಂತೋಷವನ್ನು ನೇಮದಿಯನ್ನು ಹಾಳು ಮಾಡಿಕೊಳ್ಳುವ ವ್ಯಕ್ತಿಗೆ ಅರಿವೆ ಗುರು ಎನ್ನುವ ತತ್ವ ನಿರುವದು ಅದ್ಯಂತ ಕಠಿಣವಾದ ಕೆಲಸ ಅದನ್ನು ತಿಳಿಯದ ಜೀವಿಗಳು ಜೀವನುದ್ದುದ್ದರು ತೊಳಲುತ್ತಲೆ ಬದುಕುತ್ತಾರೆ ಎಂದು ಹೆಳುತ್ತಾರೆ ಹೀಗೆ ಗುರು ಎನ್ನುವ ಎರಡಕ್ಷರದ ಈ ತತ್ವ ಪ್ರತಿವ್ಯಕ್ತಿಯ ಜೀವನದಲ್ಲು ಅತ್ಯಂತ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ.

**ಸಾವೆಂಬ ಭೂತ ತಮಂಧವಾಗಿ ಬೆನ್ನಹತ್ತಿರೆ**
**ಭಕ್ತಿ ದಾಸೋಹವೆಂಬ ಬತ್ತಿ ದೀಪದೆದುರು**
**ಸಾವು ಸತ್ತು ಕತ್ತಲೆ ಬೆತ್ತಲೆಯಾಯಿತಯ್ಯಾ**
**ಸಾವು ಸತ್ತು ಸಾವೆ 'ದೇವ' ಕಾಣುವ ಮಹಾದ್ವಾರವಾಗಿ**
**ಮಹಾನವಮಿಯಾಯಿತಯ್ಯ**
**ಭಕ್ತಿ ಭೈರವನಾಗಿ, ಶಿವನುಭವಿಯಾಗಿ ಶಿವನಾದರಯ್ಯಾ**
**ಗಿಡಮರ ಬಳ್ಳಿಯ ಕೊನೆ, ತೆನೆ–ಹೂ–ಹಣ್ಣಾಗುವಂತೆ**
**ಸಾವು ಸತ್ತು ಜೀವನದಲ್ಲಿ ಕೊನೆ ಸತ್ಯ ಸುಂದರ–ಶಿವನಾಗುವುದೇ**
**ಮಹಾದಾಸೋಹ ಸೂತ್ರವಯ್ಯ ಮಹಾದಾಸೋಹಿ ಶರಣಬಸವೆ**

ಪೂಜ್ಯರ ಈ ಸೂತ್ರದಲ್ಲಿ
ತನು ನನ್ನದೆಂದರೆ ನಾಯಿಬೆನ್ನಟಿದ ಭಯ, ಮನ ನನ್ನದೆಂದರೆ ಸಿಂಹ ಎದುರಾದ ಭಯ, ಭಾವ ನನ್ನದೆಂದಾಗ ಸಾವಿನ ಭಯ ಎದುರಾಯಿತು. ತನುವನ್ನು ಇಷ್ಟಲಿಂಗಕ್ಕೆ ಮನವನ್ನು ಪ್ರಾಣಲಿಂಗಕ್ಕೆ ಭಾವವನ್ನು ಭಾವಲಿಂಗಕ್ಕೆ ಅರ್ಪಿಸಿದಾಗ ಎಲ್ಲಾ ಭಯಗಳು ದೂರಾಗಿ ಭಕ್ತಿದಾಸೋಹ ಉತ್ಪತ್ತಿಯಾಗಿ ಶಿವನಾಗುವುದು ಮಹಾದಾಸೋಹ ಸೂತ್ರ ಎಂದು ಹೇಳಿದ್ದಾರೆ. ಜ್ಞಾನವನ್ನು ನೀಡುವ ದೀಕ್ಷೆಯನ್ನ ಮತ್ತು ಮೋಕ್ಷವನ್ನು ನೀಡುವ ಗುರುವನ್ನು ಗುರುವೆಂದು ಹೇಳುತ್ತಾ ಸಮಯಕ್ಕನುಗುಣವಾಗಿ ಒಳ್ಳೆಯ ಮಾರ್ಗದರ್ಶನವನ್ನು ನೀಡುವ ವ್ಯಕ್ತಿಯು ಸಹ ಗುರುವಿನ ಸ್ಥಾನದಲ್ಲಿ ನಿಲ್ಲುತ್ತಾನೆ. ಪುರಾತನ ಶರಣನಾದ ಮಲುಹಣ ಉತ್ತರ ಭಾರತದವನಾಗಿದ್ದು ಒಂದು ಸಲ ಹಿಮ ಬಿದ್ದಾಗಲು ಆ ಹಿಮವನ್ನು ಲೆಕ್ಕಿಸದೆ ಹೆಂಡತಿಯ ಬಳಿ ಹೋದಾಗ, ಇಷ್ಟೇ ಪ್ರೀತಿಯನ್ನು ದೇವರಿಗೆ ತೋರಿದೆ ಆದರೆ ನೀವೊಬ್ಬ ಶ್ರೇಷ್ಠ ಮಾನವರಾಗುತ್ತಿದ್ದೀರಿ ಎನ್ನುತ್ತಾಳೆ ಅಂದಿನಿಂದ ಮಲುಹಣ ಒಬ್ಬ ಶ್ರೇಷ್ಠ ಶರಣನಾಗಿ ಬೆಳೆದದ್ದು ಇತಿಹಾಸದ ಮೂಲಕ ನಮಗೆ ಗೋಚರರವಾಗುತ್ತದೆ. ಆನರ ಬೆರಳನ್ನು ಕತ್ತರಿಸಿ. ಅದರ ಮಾಲೆಯನ್ನು ಮಾಡಿ ಹಾಕಿಕೊಳ್ಳುತ್ತಿದ್ದ ಒಬ್ಬ ವ್ಯಕ್ತಿಗೆ ಅಂಗುಲಿಮಾಲ ಎಂದು ಜನ ಕರೆಯುತ್ತಿದ್ದರು. ಆ ಮಾರ್ಗವಾಗಿ ಹೋಗುತ್ತಿದ್ದ ಗೌತಮಬುದ್ಧನ ಮಾರ್ಗದರ್ಶನದಿಂದ ಅಂಗುಲಿಮಾಲ ಒಬ್ಬ ಒಳ್ಳೆಯ ವ್ಯಕ್ತಿಯಾಗಿ ಪರಿವರ್ತಿತನಾಗುತ್ತಾನೆ. ನಾಯಿ ಬೆನ್ನುಹತ್ತಿದಾಗ ಸಿಂಹ ಎದುರಾದ ಮೇಲೆ ನಾಯಿಯ ಭಯ ದೂರವಾಯಿತು ಸಿಂಹ ಬೆನ್ನುಹತ್ತಿದಾಗ ಸಾವು ಎದುರಾದಾಗ ಸಿಂಹದ ಭಯ ದೂರವಾಯಿತು ಸಾವು ಬೆನ್ನುಟ್ಟುತ್ತಿದ್ದ ಹಾಗೆ ಭಕ್ತಿಯಂಬ ದೀಪ ಸಾವಿನ ಭಯವನ್ನು ದೂರಮಾಡಿತುಭಕ್ತಿದೀಪ ಉತ್ಪತಿಯಾಗುತಿದ್ದಂತೆಯೆ ತನವನ್ನು ಇಷ್ಟ ಲಿಂಗಕ್ಕೆ ವಾವವನ್ನು ಪ್ರಾಣಲಿಂಗಕ್ಕೆ ಭಾವವನ್ನು ಭಾವಲಿಂಗಕ್ಕೆ ಅರ್ಪಿಸಿ ಎಲ್ಲಾ ಭಯಗಳು ದೂರಾಗಿ ಶಿವನಾಗುವುದೆ ಮಹಾದಾಸೋಹ ಸೂತ್ರ ಎಂದು ಹೇಳಿದ್ದಾರೆ ಇಂತಹ ಅರಿವನ್ನು ನಮ್ಮದಾಗಿಸಿಕೊಳ್ಳುವ ಗುರಿಯನ್ನು ಹೊಂದಿ ಜೀವನವನ್ನು ಸುಂದರವಾಗಿ ಮಡಿಕೊಳ್ಳುವುದು ಇಂದಿನ ಸಮಾಜದಲ್ಲಿ ಅತ್ಯಗತವಾಗಿದೆ.

## References


1. Internet access
2. International Journals
3. Mahadasoha Sutragalu
4. Discussion with Kannada scholars. & etc.